ದಿನಾಂಕ 20.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**<u>ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ. ಟಿ ಎನ್ ಎಸ್ ವಕೀಲರಿಂದಃ</u>**

ನಮ್ಮ ಊರಿಗೂ ಚಿಂತಾಮಣಿಗೂ ಐದಾರು ಕಿ.ಮೀ. ಇದೆ. ಮಂಜುನಾಥ ರವರನ್ನು ಮದುವೆಯಾದ ನಂತರದಿಂದ ನೋಡಿದ್ದೇನೆ. ಮದುವೆಯಾದ ನಂತರ ಅವರ ಮನೆಯ ಗೃಹ ಪ್ರವೇಶಕ್ಕೆ ಹಬ್ಬಗಳಿಗೆ ಹೋಗುತ್ತಿದೆ. ಮದುವೆಯಾದ ನಂತರ ಅರ್ಜಿದಾರರು ಚಿಂತಾಮಣಿಯಲ್ಲಿದ್ದರು. ಅರ್ಜಿದಾರರ ಮದುವೆಯಾದಾಗಿನಿಂದ ಅವರ ಚಿಂತಾಮಣಿಯ ಮನೆಗೆ ಹೋಗುತ್ತಿದೆ. ಸಾಕ್ಷಿಯು ಮುಂದುವರಿದು ನುಡಿಯುತ್ತಾರೆ ನಾನು ಮತ್ತು ಅರ್ಜಿದಾರರು ತುಂಬಾ ಒಳ್ಳೆಯ ಸ್ನೇಹಿತರು. ಅರ್ಜಿದಾರರ ಮೇಲೆ ಎದುರುದಾರಳು ಆಗಿನ ತಹಶೀಲ್ದಾರ, ಎಸಿ, ಡಿಸಿ ಯವಗೆ ದೂರು ಕೊಟ್ಟಿರುವ ವಿಚಾರ ನನಗೆ ಗೊತ್ತಿದೆ. ಅರ್ಜಿದಾರರ ಮೇಲೆ ವಿಚಾರಣೆಯಾದ ವಿಚಾರ ಗೊತ್ತಿದೆ. ನಾನು ವಿಚಾರಣೆಗೆ ಹೋಗಿಲ್ಲ ಆದರೆ ದೂರು ಕೊಟ್ಟಿರುವ ವಿಚಾರ ಗೊತ್ತಿತ್ತು. 2002 ರಲ್ಲಿ ಆ ರೀತಿ ದೂರು ಕೊಟ್ಟಿದ್ದರು. ಅದರಿಂದ ವಿಚಾರಣೆ ನಡೆದು ಅರ್ಜಿದಾರರಿಗೆ ಎಷ್ಟೆಲ್ಲಾ ತೊಂದರೆ ಆಯಿತು ಅನ್ನುವ ವಿಚಾರ ನನಗೆ ಗೊತ್ತಿಲ್ಲ.

ಗಲಾಟೆಯಾದ ನಂತರ 10 ರಿಂದ 11 ದಿನ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಯಾವ ಆಸ್ಪತ್ರೆ ಎಂದು ನನಗೆ ಗೊತ್ತಿಲ್ಲ. ನಾನು ಆಸ್ಪತ್ರೆಗೆ ಹೋಗಿಲ್ಲ. ಅವರು ಗಲಾಟೆ ಮಾಡಿಕೊಂಡು ಕೇಸ ಮಾಡಿರುವ ವಿಚಾರವು ನನಗೆ ಗೊತ್ತು. ಎದುರುದಾರಳು ಡಿವಿಸಿ ಕೇಸ ಮತ್ತು ಜೀವನಾಂಶ ಕೇಸ ಹಾಕಿರುವ ವಿಚಾರ ಗೊತ್ತು ಆದರೆ ವಿವರಣೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬ್ಯಾಂಕ್ ನಲ್ಲಿ ಸಾಲ ಮಾಡಿರುವ ಬಗ್ಗೆ ತಿಳಿಸಿದ್ದು ಅದರಂತೆ ಅರ್ಜಿದಾರಳು ಎದುರುದಾರರ ಹೆಸರಿನಲ್ಲಿ ಸಾಲ ಮಾಡಿದ್ದು ಅವರ ಸಂಬಳದಿಂದ ಹಣ ಕಟಾವು ಆಗುತ್ತಿದೆ. ಎದುರುದಾರರ ಖಾತೆಯಿಂದ ಹಣ ಕಟಾವು ಆಗುತ್ತಿರುವ ಬಗ್ಗೆ State Bank of India ಪಾಸಬುಕ್ ನೋಡಿದ್ದೇನೆ. ಎದುರುದಾರರು ಸ್ವಂತ ಮನೆ ತೆಗೆದುಕೊಂಡಿರುವ ವಿಚಾರ ಗೊತ್ತಿದೆ. ಆಕೆ ನೋಂದಣಿ ಮಾಡಿಸಿಕೊಂಡಿರುವ ಮನೆಯಲ್ಲಿ ಅರ್ಜಿದಾರರು ಮತ್ತು ಮಕ್ಕಳು ವಾಸವಿದ್ದಾರೆ. 2022 ರಿಂದ ಗಲಾಟೆ ಮಾಡಿಕೊಳ್ಳುತ್ತಿರುವ ವಿಚಾರ ಮಾತ್ರ ನನಗೆ ಗೊತ್ತಿದೆ. ಅದಕ್ಕಿಂತ ಮುಂಚೆ ಗಲಾಟೆ ಮಾಡುತ್ತಿರುವ ವಿಚಾರ ನನಗೆ ಗೊತ್ತಿಲ್ಲ. 2022 ಇಸವಿ ನಂತರ ಗಲಾಟೆ ಮಾಡಿಕೊಳ್ಳುತ್ತಿರು ವಿಚಾರ ನಾನು ಕೇಳಿಲ್ಲ ಮತ್ತು ರಾಜಿ ಪಂಚಾಯತಿಗೂ ಹೋಗಿಲ್ಲ. ಗಲಾಟೆಯ ವಿಚಾರವನ್ನು

ಎದುರುದಾರಳ ತಮ್ಮ ನನಗೆ ಸ್ನೇಹಿತನಾದ ಕಾರಣ ತಿಳಿಸಿದ್ದಾರೆ. ಎದುರುದಾರರ ಅಣ್ಣ ನನಗೆ ದೂರದ ಸಂಬಂಧಿಯಾಗಬೇಕು ಈ ಕೇಸಿನ ವಿಚಾರವನ್ನು ನಾನು ರಾಜಿ ಪಂಚಾಯತಿಗೆ ಹೋಗಿದ್ದಾಗ ತಿಳಿಸಿದ್ದಾರೆ. ಗಲಾಟೆಯಾಗುವ ಮುಂಚೆ 2-3 ತಿಂಗಳ ಮುಂಚೆ ಈ ಕೇಸಿನ ವಿಚಾರ ತಿಳಿಸಿದ್ದಾರೆ. ಅಮರ ಅಂದರೆ ಡಿಎಸ್ ಎಸ್ ಸ್ಟೇಟ್ ಲೀಡರ್ ಎಂದರೆ ಸರಿ. ನನ್ನ ಪ್ರಮಾಣ ಪತ್ರದಲ್ಲಿ ವರದಕ್ಷಿಣೆ ವಿಚಾರವನ್ನು ತಿಳಿಸಿದ್ದೇನೆ. ವರದಕ್ಷಿಣೆ ವಿಚಾರವನ್ನು ಮಂಜುನಾಥ ನನ್ನ ಸಮಕ್ಷಮದಲ್ಲಿ ಕೇಳಿಲ್ಲ. ನಾನು ಅಮರ ರವರ ಸ್ನೇಹಿತನಾದ ಕಾರಣ ನಾನು ಎದುರುದಾರಳ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.